**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 232/2017
ಪಿಡಬ್ಲು : 10 ಸಿಡಬ್ಲು : 11

| | |
|---|---|
| ಸಾಕ್ಷಿಯ ಹೆಸರು | : ಮಲ್ಲಿಕಾರ್ಜುನ ಚೆನ್ನಬಸಪ್ಪ ಪೋಳ |
| ವಯಸ್ಸು | : 27 ವರ್ಷ |
| ಉದ್ಯೋಗ | : ಖಾಸಗಿ ಕೆಲಸ |
| ವಾಸ್ತವ್ಯ | : ಮುನವಳ್ಳಿ |
| ದಿನಾಂಕ | : 07-03-2020 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ಚಾಸಾ-1 ನನ್ನ ಮಾವ . ಮೃತ ಪರಶುರಾಮ ನನ್ನ ತಾತ . ಆರೋಪಿತರನ್ನು ನಾನು ನೋಡಿರುತ್ತೇನೆ .

ದಿನಾಂಕಃ 05-04-2017 ರಂದು ಬೆಳಗ್ಗೆ 10.00 ಗಂಟೆಗೆ ನಾನು ಹೊಲದಲ್ಲಿರುವಾಗ ನಾನು , ಚಾಸಾ-9,10 , ನನ್ನ ಅಜ್ಜ ಮೃತ ಪರಶುರಾಮ ಇದ್ದೆವು . ಮದ್ಯಾಹ್ನ 12.00 ಗಂಟೆಗೆ ಬಿಸಿಲು ಬಹಳ ಇದ್ದದರಿಂದ ಪಕ್ಕದಲ್ಲಿ ಒಂದು ಬೇವಿನ ಗಿಡ ಇದ್ದು ಮೃತ ನನ್ನ ತಾತ ನೆರಳಿಗೆ ನಿಲ್ಲುತ್ತೇನೆ ಅಂತಾ ಬೆವಿನ ಗಿಡದ ಹತ್ತಿರ ಹೋದರು . 200 ಅಡಿ ದೂರದಲ್ಲಿ ನಾವು ನಮ್ಮ ಹೊಲದಲ್ಲಿದ್ದೆವು .

ಮದ್ಯಾಹ್ನ 12.30 ಗಂಟೆಗೆ ನಮಗೆ ಕಿರುಚಿದ ಶಬ್ದ ಕೇಳಿತು , ನಾವು ನೋಡಿದಾಗ ನನ್ನ ತಾತನಿಗೆ ಆರೋಪಿತರು ಬಡಿಯುತ್ತಿದ್ದರು , ಆಗ ನಾವು ಆ ಸ್ತಳಕ್ಕೆ ಹೋದೆವು , ಆರೋಪಿ-1 ಕಲ್ಲಿನಿಂದ ಮೃತ ಪರಶುರಾಮ ಇವನಿಗೆ ಕಲ್ಲಿನಿಂದ ತಲೆಗೆ ಹಣೆಗೆ ಕಿವಿಗೆ ಬಡಿದರು .

ಆರೋಪಿ-2 ಬಡಿಯಿಂದ ಮೃತ ನನ್ನ ತಾತನಿಗೆ ಭುಜಕ್ಕೆ ಬಡಿದ . ಆರೋಪಿ-3 ಬಡಿಗೆಯಿಂದ ಎಡಗಡೆ ಕೈಗೆ ಮತ್ತು ಕಾಲಿಗೆ ಬಡಿದ . ನಾವು ತೆಗೆದುಕೊಳ್ಳುವ ಹೊಲವನ್ನು ನೀನು ತೆಗೆದುಕೊಂಡು ಸ್ವಚ್ಚ ಮಾಡಲು ಬಂದಿದ್ದೀರಾ ಕೀಳು ಜಾತಿ ಸೂಳೇ ಮಕ್ಕಳಾ , ಬೋಸಡಿ ಮಕ್ಕಳಾ ,

ಡೋಂಗ ಸೂಳೇ ಮಕ್ಕಳಾ ಅಂತಾ ಬೈದರು . ನಂತರ ಆರೋಪಿ-1 ಕಲ್ಲಿನಿಂದ ಮೃತ ನನ್ನ ಅಜ್ಜನ ಬಾಯಿಗೆ ಹೊಡೆದು ಈ ದಿವಸ ಉಳಿದುಕೊಂಡಿದ್ದಿಯಾ ಇನ್ನೊಂದು ಸಲ ಸಿಕ್ಕರೇ ಕಲಾಸ ಮಾಡುತ್ತೇವೆ ಎಂದು ಬೈದು ಕೈಯಲ್ಲಿದ್ದ ಬಡಿಗೆ , ಕಲ್ಲು ಅಲ್ಲೆ ಎಸೆದು ಓಡಿ ಹೋದರು .

ನಂತರ ಮೃತ ನನ್ನ ಅಜ್ಜನನ್ನು ಎಬ್ಬಿಸಿ ನೋಡಿದಾಗ ಹಲ್ಲುಗಳು ಮುರಿದಿದ್ದವು . ನಂತರ ಮುಧೋಳದ ನಾಯ್ಕ ಆಸ್ಪತ್ರೆಗೆ ನನ್ನ ಅಜ್ಜನನ್ನು ಕರೆದುಕೊಂಡು ಹೋದೆವು . ಅಲ್ಲಿ 5 ನೇ ತಾರೀಕಿನಿಂದ 8 ನೇ ತಾರಿಕೀನವರೆಗೆ ಚಿಕೀತ್ಸೆ ಪಡೆದರು . ನಂತರ ಬೆಳಗಾವಿಯ lakeview ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು . ನಂತರ ನನ್ನ ಅಜ್ಜ ದಿನಾಂಕಃ 22-04-2017 ರಂದು ಮರಣ ಹೊಂದಿರುತ್ತಾರೆ ಎಂದು ಗೊತ್ತಾಯಿತು .

ನನ್ನ ಅಜ್ಜನಿಗೆ ಹೊಡೆದ ಬಡಿಗೆ , ಕಲ್ಲು ನೋಡಿದರೆ ಗುರುತಿಸುತ್ತೇನೆ , ಅವುಗಳನ್ನು ಅವುಗಳನ್ನು ಮುಮಾ-1 ರಿಂದ 4 ಎಂದು ಈಗಾಗಲೇ ಗುರುತಿಸಲಾಗಿದೆ . ಆ ದಿವಸ ಹಲ್ಲೆ ಮಾಡಿದ ವ್ಯಕ್ತಿಗಳು ನ್ಯಾಯಾಲಯದ ಮುಂದಿರುವ ಆರೋಪಿತರಾಗಿರುತ್ತಾರೆ . ಇದಕ್ಕೆ ಸಂಬಂಧಪಟ್ಟಂತೆ ಪೋಲಿಸರು ನನ್ನ ವಿಚಾರಣೆ ಮಾಡಿ ಹೇಳಿಕೆ ಮಾಡಿಕೊಂಡಿರುತ್ತಾರೆ .

**ಪಾಟೀ ಸವಾಲು: ಶ್ರೀ. ಬಿ ಎಸ ಡಿ ವಕೀಲರಿಂದ ಆರೋಪಿತನ ಪರವಾಗಿ**

ಆರೋಪಿ ಪರ ವಕೀಲರು ಈ ಕೇಸಿನ ಪ್ರತ್ಯಕ್ಷ ಸಾಕ್ಷಿದಾರರನ್ನು ಸಂಬಂಧಿಕ ಸಾಕ್ಷಿಗಳನ್ನು ಎಲ್ಲರನ್ನೂ ಒಂದೇ ದಿವಸ ಪಾಟೀ ಸವಾಲು ಮಾಡುವ ಬಗ್ಗೆ ದಂಡ ಪ್ರಕ್ರೀಯಾ ಸಂಹಿತೆ ಕಲಂ 323(2) ರ ಅಡಿಯಲ್ಲಿ ಸಲ್ಲಿಸಿದ್ದು ಅರ್ಜಿಯನ್ನು ದಿನಾಂಕಃ 27-09-2019 ರಂದು ಪುರಸ್ಕರಿಸಿದ್ದರಿಂದ ಪಾಟೀ ಸವಾಲಿಗೆ ಸಮಯ ನೀಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಎಂ ಹೆಚ ಅಣ್ಣಯ್ಯನವರ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.